ಅಧ್ಯಾಯ 7

# ಮೊಗವೀರರ ಸಂಘಟನೆಗಳು

1 ಸಾಂಪ್ರದಾಯಿಕ ಮೊಗವೀರರ ಸಂಘಟನೆಗಳು

2 ಮೊಗವೀರ ಗ್ರಾಮಸಭೆಗಳು

3 ಮೊಗವೀರ ಸಂಯುಕ್ತ ಪಟ್ಣಗಳು

4 ಮೂರು ಹೋಬಳಿಗಳು, ಒಂದು ಪರಿಕಲ್ಪನೆ

5 ದಕ್ಷಿಣ ಕನ್ನಡ ಮೊಗವೀರ ಮಹಾಜನ ಸಂಘ

6 ಬಗ್ವಾಡಿ ಹೋಬಳಿಯ ಪ್ರಧಾನ ಸಭೆ

7 ಮೊಗವೀರ ಮಹಾಜನ ಸೇವಾ ಸಂಘ (ಬಗ್ವಾಡಿ ಹೋಬಳಿ 1941)

8 ಗ್ರಾಮಸಭೆ, ಸಂಯುಕ್ತ ಪಟ್ಣ ಸಭೆ ಮತ್ತು ಮೂರು ಹೋಬಳಿಗಳ ಸ್ಥಾನಮಾನ ("ಅನುಬಂಧ-1")

9 ಉಚ್ಚಿಲ ಗ್ರಾಮದ ವಿಶೇಷ ಸಮೀಕ್ಷಾ ವರದಿ

10 ಪಕ್ಕದ ಹಳ್ಳಿಗಳಲ್ಲಿ ಮೊಗವೀರರ ನೆಲೆಸುವಿಕೆ

11 ಮೊಗವೀರ ಮಹಿಳೆಯರ ಸಂಘಟನೆಗಳು ("ಅನುಬಂಧ-2")

12 ಮೊಗವೀರರ ಧಾರ್ಮಿಕ ಸಂಘಟನೆಗಳು ("ಅನುಬಂಧ-3")

13 ಮೊಗವೀರರ ಶೈಕ್ಷಣಿಕ ಮತ್ತು ಇತರ ಸಂಸ್ಥೆಗಳು ("ಅನುಬಂಧ-4")

14 ತಾಲೂಕು/ಜಿಲ್ಲಾ ಮಟ್ಟದ ಯುವ ಸಂಘಟನೆ

15 ಮುಖ್ಯ (ಚಾರಿಟೇಬಲ್) ಸಂಸ್ಥೆಗಳು

16 ಕರ್ನಾಟಕ ರಾಜ್ಯದಲ್ಲಿ ಮೊಗವೀರರ ಸಂಸ್ಥೆಗಳು

17 ಮಹಾರಾಷ್ಟ್ರ ರಾಜ್ಯದಲ್ಲಿ ಮೊಗವೀರರ ಸಂಸ್ಥೆಗಳು

18 ಪರದೇಶಗಳಲ್ಲಿ ಮೊಗವೀರರ ಸಂಘಟನೆಗಳು

19 ಮೊಗವೀರರ ಸಂಘಟನೆಗಳ ಮತ್ತು ಸಂಸ್ಥೆಗಳ ಸಂಕ್ಷಿಪ್ತ ಮಾಹಿತಿ

# ಮೊಗವೀರರ ಸಂಘಟನೆಗಳು

**ಸಾಂಪ್ರದಾಯಿಕ ಮೊಗವೀರರ ಸಂಘಟನೆಗಳು**

ಸಾಂಪ್ರದಾಯಿಕ ಮೊಗವೀರರ ಸಂಘಟನೆಗಳಿರುವ 353 ಮೊಗವೀರರ ಹಳ್ಳಿಗಳಿವೆ. ಮೊಗವೀರರ ಸಾಂಪ್ರದಾಯಿಕ ಸಂಘಟನೆಯಲ್ಲಿ, ಗ್ರಾಮಸಭೆಗಳು, ಸಂಯುಕ್ತ ಪಟ್ಣಗಳು, ಹೋಬಳಿಗಳು, ಸರ್ವ ಹೋಬಳಿ ಸಭೆಗಳು, ಮೊಗವೀರ ಮಹಿಳಾ ಮಂಡಲಗಳು, ಭಜನಾ ಮಂದಿರಗಳು ಇತ್ಯಾದಿಗಳಿವೆ. ಪ್ರತಿಯೊಬ್ಬ ಮೊಗವೀರ ಪುರುಷ ಹಾಗೂ ಮಹಿಳೆ ಹುಟ್ಟಿದಾಗಿಂದಲೇ ತಮ್ಮ ಗ್ರಾಮದ ಸಾಂಪ್ರದಾಯಿಕ ಸಂಘಟನೆಯ ಸದಸ್ಯರಾಗಲು ಅರ್ಹರಾಗಿರುತ್ತಾರೆ. ಈ ಎಲ್ಲಾ ಮೊಗವೀರ ಸಂಘಟನೆಗಳ ವಿವರವನ್ನು "ಅನುಬಂಧ" ಎಂಬ ಅಧ್ಯಾಯದಲ್ಲಿ ಕೊಡಲಾಗಿದೆ.

**ಮೊಗವೀರ ಗ್ರಾಮ ಸಭೆಗಳು**

ಪ್ರತೀ ಮೊಗವೀರರ ಹಳ್ಳಿಗಳಲ್ಲಿ, ಒಂದು ಮೊಗವೀರ ಗ್ರಾಮಸಭೆ ಅಸ್ತಿತ್ವದಲ್ಲಿರುತ್ತದೆ. ಹಳ್ಳಿಯಲ್ಲಿ 18 ವರ್ಷಕ್ಕೆ ಮೇಲ್ಪಟ್ಟ ಪ್ರತೀ ಗಂಡಸು, ಈ ಸಭೆಯ ಸದಸ್ಯನೆಂದು ಪರಿಗಣಿಸಲ್ಪಡುತ್ತಾನೆ. ಕೆಲವು ಗ್ರಾಮಸಭೆಗಳು ಕರ್ನಾಟಕ ಸರಕಾರದ 'ಸೊಸೈಟಿ' ಕಾಯ್ದೆಯ ಪ್ರಕಾರ ನೋಂದಾಯಿಸಲ್ಪಟ್ಟಿರುತ್ತವೆ. ಗ್ರಾಮಸಭೆಯು ಸಂಯುಕ್ತ ಪಟ್ಣ ಸಭೆಯು ಮತ್ತು ಸಂಯುಕ್ತ ಪಟ್ಣ ಸಭೆಯು ಹೋಬಳಿ ಸಭೆಯು ಅಥವಾ ಸರ್ವ ಹೋಬಳಿ ಸಭೆಯ ಸದಸ್ಯರಾಗಿರುತ್ತಾರೆ. ಗ್ರಾಮ ಸಭೆಗಳು, ಸಂಯುಕ್ತ ಪಟ್ಣ ಸಭೆಗಳು, ಹೋಬಳಿಗಳು ಮತ್ತು ಸರ್ವ ಹೋಬಳಿ ಸಭೆಗಳು, ಮೊಗವೀರ ಸಮಾಜದ ಕಾರ್ಯ ಚಟುವಟಿಕೆಗಳನ್ನು ತನ್ನ ನಿಯಂತ್ರಣದಲ್ಲಿ ಇರಿಸಿಕೊಂಡಿವೆ". ಮುಖ್ಯವಾಗಿ, ಮೀನುಗಾರಿಕೆ, ಸಮಾಜದ ಧಾರ್ಮಿಕ ಆಚರಣೆ ಮಾತ್ರವಲ್ಲದೆ, ತನ್ನ ಸದಸ್ಯರ ಜನನದಾರಭ್ಯದಿಂದ ಮರಣದವರೆಗಿನ ಸಂಸ್ಕಾರ ಸಂಬಂಧದ ಆಚರಣೆಗಳು, ತನ್ನ ಸದಸ್ಯರೊಳಗಿನ ವಾದ-ವಿವಾದ ತೀರ್ಮಾನಿಸುವುದು ಇತ್ಯಾದಿಗಳು ಕೂಡಿಕೊಂಡಿವೆ". ಅನಿವಾರ್ಯ ಸಂದರ್ಭಗಳಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ತೀರ್ಮಾನಿಸುವುದೂ ಉಂಟು.

**ಆಡಳಿತ ಕಾರ್ಯ ನಿರ್ವಹಣೆ**

ಹಿಂದೆ ಗ್ರಾಮಸಭೆಯ ಮುಖ್ಯಸ್ಥರಾಗಿ ಅನುವಂಶಿಕ ಗುರಿಕಾರರು ಕಾರ್ಯ ನಿರ್ವಹಿಸುತ್ತಿದ್ದರು. ಗುರಿಕಾರತನವು ಮಾವನಿಂದ ಸೋದರಳಿಯನಿಗೆ ವಂಶ ಪಾರಂಪರ್ಯವಾಗಿ ಸಿಗುತ್ತಿತ್ತು. 1950ರಿಂದ ಚುನಾಯಿತ ಆಡಳಿತ ಸಮಿತಿ, ಗ್ರಾಮ ಸಭೆಯ ಆಡಳಿತ ಸೂತ್ರವನ್ನು ಹಿಡಿಯಿತು. ಈಗ ಗುರಿಕಾರ ಪದ್ದತಿಯ ಸಾಂಕೇತಿಕವಾಗಿ ಇದ್ದರೂ, ಹೆಚ್ಚಿನ ಹಳ್ಳಿಗಳಲ್ಲಿ ಗುರಿಕಾರ ಪದ್ದತಿಯು ಅಸ್ತಿತ್ವದಲ್ಲಿಲ್ಲ. ಹೆಚ್ಚಿನ ಹಳ್ಳಿಗಳಲ್ಲಿ ಗುರಿಕಾರರ ವಂಶಸ್ಥರು ಆ ಹುದ್ದೆಯನ್ನು ಸ್ವೀಕರಿಸಲು ಇಲ್ಲವೇ ಮುಂದುವರಿಸಲು ನಿರಾಕರಿಸುತ್ತಿರುವುದೇ ಇದಕ್ಕೆ ಕಾರಣವಾಗಿರಬಹುದು.

**ಮೇಲ್ವಿಚಾರಣೆ ಮತ್ತು ನಿಬಂಧನೆಗಳು**

ಮೀನುಗಾರಿಕೆ ವ್ಯವಸಾಯದಲ್ಲಿ ಕೆಲವೊಂದು ಕ್ರಮ ನಿಬಂಧನೆಗಳು ಇರುವುದನ್ನು ಗಮನಿಸಬಹುದಾಗಿದೆ. ಉದಾಹರಣೆಗೆ 'ರಂಪಣಿ', 'ವೈಬಲೆ', 'ಪಟ್ಟೆಬಲೆ' ಇತ್ಯಾದಿ ಹೆಚ್ಚು ಜನರಿಂದ ನಡೆಸಲ್ಪಡುವ ಉದ್ಯೋಗದಂತಹ ದೊಡ್ಡ ಮಟ್ಟದ ಮೀನುಗಾರಿಕೆಯನ್ನು ಸೂರ್ಯೋದಯದ ಬಳಿಕವೇ ಪ್ರಾರಂಭಿಸಿ, ಸೂರ್ಯಾಸ್ತದೊಳಗೆ ದಡ ಸೇರಬೇಕೆಂಬ ಕ್ರಮ ನಿಬಂಧನೆಗಳಿವೆ. ಈ ನಿಯಮವು ಮೇಲಿನ ದೊಡ್ಡಮಟ್ಟದ ಮೀನುಗಾರಿಕೆಗೆ ಅನ್ವಯಿಸುವಂತೆ ಜಾರಿ ಮಾಡಲಾಗಿದ್ದರೂ, ರಾತ್ರಿ ಹೊತ್ತಿನಲ್ಲಿ ಒಬ್ಬನಿಂದಲೇ ನಡೆಸಲ್ಪಡುವ ಮೀನುಗಾರಿಕೆಯು ಕೇವಲ ಸಮುದ್ರ ತಟದಲ್ಲಿ ಮಾತ್ರ ನಡೆಸಬಹುದಾಗಿದೆ. ಈ

ಪ್ರಕಾರ ಬೃಹತ್ ಗಾತ್ರದ ರಾತ್ರಿ ಮೀನುಗಾರಿಕೆ ನಿಷೇಧಿಸಲ್ಪಟ್ಟಿರುವುದರಿಂದ ಸಮುದ್ರ ಗರ್ಭದಲ್ಲಿ ಮತ್ಸ್ಯ ಸಂಪತ್ತು ಪುನಃ ನಿರ್ಮಾಣವಾಗುವುದಲ್ಲದೆ ಮೀನುಗಾರರಿಗೆ ಸಾಕಷ್ಟು ವಿಶ್ರಾಂತಿಯೂ ದೊರೆತಂತಾಗುತಿತ್ತು.

**ಆದಾಯ ಹಾಗೂ ಸಂಪನ್ಮೂಲ**

ಮೊಗವೀರ ಗ್ರಾಮಸಭೆಗಳಿಗೆ ತನ್ನ ಕಾರ್ಯಚಟುವಟಿಕೆಗೆ ಸಂಪನ್ಮೂಲದ ಅವಶ್ಯಕತೆ ಇದೆ. ಅದಕ್ಕಾಗಿ ತನ್ನ ಗ್ರಾಮದಲ್ಲಿ ಮತ್ಸ್ಯ ವ್ಯವಸಾಯ ಮಾಡುವ ಪ್ರತ್ಯೇಕ ಗುಂಪುಗಳು ('ಫಂಡುಗಳು'') ತನ್ನ ದುಡಿಮೆಯಿಂದ, ಒಂದು ಪಾಲು ಗ್ರಾಮ ಸಭೆಯ ಭಂಡಾರಕ್ಕೆ ಸಲ್ಲಿಸುವ ನಿಯಮವಿದೆ. ಉದಾ: 'ಬಿಸಣ', 'ಪಟ್ಟೆ ಬಲೆ', 'ವೈ ಬಲೆ', 'ಕೈರಂಪಣಿ', 'ರಂಪಣಿ ಫಂಡು'ಗಳು ತಮ್ಮ ಸಂಪಾದನೆಯನ್ನು ಸದಸ್ಯರೊಳಗೆ ಹಂಚುವಾಗ ('ಬಟವಾಡೆ') ಮಾಡುವಾಗ, ಒಂದು ಪಾಲನ್ನು ತಮ್ಮ ಗ್ರಾಮಸಭೆಗೆ ಕೊಡುತ್ತಿದ್ದರು. ಮೊಗವೀರರಲ್ಲಿ ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಈ ಪದ್ಧತಿಯು ಬಹುಶಃ ಸರಕಾರದ 'ಆದಾಯ ತೆರಿಗೆ ಕಾಯ್ದೆ'ಯಲ್ಲಿ ಬರುವ 'ಆದಾಯ ತೆರಿಗೆ ಮುರಿದುಕೊಳ್ಳುವ (ಖಿಆಖ) ಕ್ರಮ'ಕ್ಕೆ ಸ್ಫೂರ್ತಿಯಾಗಿರಬಹುದು. ಕೆಲವು ಗ್ರಾಮಸಭೆಗಳು, ತಮ್ಮಲ್ಲಿರುವ ಹೆಚ್ಚುವರಿ ಸಂಪನ್ಮೂಲವನ್ನು ಬ್ಯಾಂಕುಗಳಲ್ಲಿ ಠೇವಣಿಯಾಗಿ ತೊಡಗಿಸಿ, ತಮ್ಮ ಭಂಡಾರದ ಮೂಲಧನವನ್ನು ಅಭಿವೃದ್ಧಿ ಮಾಡಿದ ಆದಾಯವನ್ನು ಗ್ರಾಮಸಭೆಯ ಕಾರ್ಯಕ್ರಮಕ್ಕೆ ಉಪಯೋಗಿಸುತ್ತಾರೆ.

**ಸಮಾಜ ಸೇವಾ ಮನೋಭಾವ**

ಮೊಗವೀರ ಸಮಾಜದಲ್ಲಿ, ಸರ್ವರಿಗೂ 'ಸಮಬಾಳು-ಸಮಪಾಲು' ಪದ್ಧತಿ ಇರುವಂತೆ, ಜನರಲ್ಲಿ ಸಮಾಜ ಸೇವಾ ಮನೋಭಾವವನ್ನು ಜಾಗೃತಗೊಳಿಸುವ ಸಲುವಾಗಿ, ಕೆಲವೊಂದು ಸಾಮಾಜಿಕ ಕಟ್ಟುಪಾಡುಗಳು ಇವೆ. ತಮ್ಮ ಗ್ರಾಮದಲ್ಲಿರುವ ದೈವಸ್ಥಾನ ಮತ್ತು ಭಜನಾ ಮಂದಿರಗಳ ಕಾರ್ಯಕ್ರಮಗಳಲ್ಲಿ ಸದಸ್ಯರು ಭಾಗವಹಿಸುತ್ತಾರೆ. ದೇವಸ್ಥಾನದ ರಥ ಎಳೆಯುವುದು, ಬಲಿ ಸಮಯದಲ್ಲಿ ಅಂಗಣ ಶುದ್ಧೀಕರಣ ಸೇವೆ, ದೀವಟಿಗೆ ಸೇವೆ ಇತ್ಯಾದಿ ಮಾಡುತ್ತಾರೆ. ತನ್ನ ಗ್ರಾಮದ ಒಂದು ಮನೆಯಲ್ಲಿ ಮದುವೆ ಜರಗುವುದಿದ್ದರೆ ಅಲ್ಲಿ ಚಪ್ಪರ ಹಾಕುವುದು ಮತ್ತು ಅಡುಗೆ ಕೆಲಸವನ್ನು ಗ್ರಾಮದ ಪ್ರತೀ ಮನೆಯ ಗಂಡಸರೂ/ಹೆಂಗಸರೂ ಸೇರಿಕೊಂಡು ಮಾಡುತ್ತಾರೆ. ಗ್ರಾಮದಲ್ಲಿ ಯಾರಾದರೂ ಮರ'ಣಹೊಂದಿದರೆ, ಶವ ಸಂಸ್ಕಾರದ ಸಿದ್ಧತೆಗಳನ್ನು ಮಾಡುವುದೇ ಮೊದಲಾದ ಕೆಲಸಗಳನ್ನು ಗ್ರಾಮಸ್ಥರು ಜ'ೊತೆಯಾಗಿ ಮಾಡುತ್ತಾರೆ. ಸಹಬಾಳ್ವೆಯ ಆಚರಣೆಗಳಾದ ಮದುವೆ, ಶವ ಸಂಸ್ಕಾರ ಇತ್ಯಾದಿ ಕಾರ್ಯಕ್ರಮಗಳಲ್ಲಿ ಮಹಿಳೆಯರಿಗೇ ಸೀಮಿತ ಕೆಲಸಗಳಿರುತ್ತವೆ. ಪ್ರತೀ ಕುಟುಂಬದ ಓರ್ವ ಮಹಿಳೆ ಆ ಕೆಲಸಗಳಲ್ಲಿ ಭಾಗವಹಿಸುತ್ತಾಳೆ. ಹೆಚ್ಚಿನ ಗ್ರಾಮಗಳಲ್ಲಿ ಭಜನಾ ಮಂದಿರದ ಕಾರ್ಯಕ್ರಮಗಳಲ್ಲಿ ಕಡ್ಡಾಯವಾಗಿ ಭಾಗವಹಿಸುವ 'ಹಾಜರಾತಿ' ಪದ್ಧತಿಯಿದೆ. ಈ ಹಾಜರಾತಿಗೆ ತಪ್ಪಿದರೆ ಗ್ರಾಮಸಭೆ 'ದಂಡ' ವಿಧಿಸುವ ಕ್ರಮವೂ ಇದೆ. ಈ ಸಹಬಾಳ್ವೆಯ ಪ್ರಯೋಜನ ಗ್ರಾಮದ ಎಲ್ಲಾ ಕುಟುಂಬಗಳಿಗೂ ದೊರೆಯುವುದರಿಂದ ಎಲ್ಲರೂ ಉತ್ಸಾಹದಿಂದ ಭಾಗವಹಿಸುತ್ತಾರೆ.

**ನ್ಯಾಯದಾನ ಪದ್ಧತಿಯ ಉಗಮ**

ಒಂದು ಅರ್ಥದಲ್ಲಿ, ಗ್ರಾಮಸಭೆಗಳು ನ್ಯಾಯಾಲಯದ ಕೆಲಸವನ್ನೂ ಮಾಡುತ್ತವೆ. ತನ್ನ ಗ್ರಾಮದ ಸದಸ್ಯರೊಳಗೆ ಎದ್ದಿರುವ ವಾದ-ವಿವಾದಗಳನ್ನು ಕೂಲಂಕುಶವಾಗಿ ಪರಿಶೀಲಿಸಿ, ನ್ಯಾಯದಾನ ಮಾಡುತ್ತವೆ. ಕೆಲವೊಮ್ಮೆ ರಂಪಣಿ ಮೀನುಗಾರಿಕೆ ಸಂದರ್ಭದಲ್ಲಿ ಎರಡು ಗ್ರಾಮಕ್ಕೆ ಸೇರಿದ 'ರಂಪಣಿ ಫಂಡು'ಗಳ ಮಧ್ಯೆ ತಕರಾರು ಉಂಟಾಗುವುದಿದೆ. ಅಂತಹ ಎರಡು ಗ್ರಾಮಗಳ ತಕರಾರುಗಳನ್ನು ಆ ಗ್ರಾಮಗಳ ಸಂಯುಕ್ತ ಪಟ್ಣ ಸಭೆ ಇತ್ಯರ್ಥಗೊಳಿಸುತ್ತದೆ.

**ರಾಜಿ ಪಂಚಾಯಿತಿ**

ಸಾಮಾನ್ಯವಾಗಿ ಗ್ರಾಮದ ಗುರಿಕಾರರು ಅಥವಾ ಸಭೆಯ ಪದಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪಂಚಾಯಿತಿದಾರರ ಉಪಸ್ಥಿತಿಯಲ್ಲಿ ಪಂಚಾಯಿತಿ ನಡೆಯುತ್ತದೆ. ಒಂದೊಮ್ಮೆ, ವಾದಿ ಮತ್ತು ಪ್ರತಿವಾದಿಗಳು ಲಿಖಿತ ರೂಪದಲ್ಲಿ ತಮ್ಮ ವಾದಗಳನ್ನು ನೀಡಿದ್ದರೆ, ಪಂಚಾಯಿತಿದಾರರು ಅದನ್ನು ಪರಿಶೀಲಿಸಿ, ವಾದಿ ಮತ್ತು ಪ್ರತಿವಾದಿಗಳ ವಾಕ್ಮೂಲವನ್ನು ಆಲಿಸುತ್ತಾರೆ. ವಿವಾದವನ್ನು ರಾಜೀ ಪಂಚಾಯಿತಿಯ ಮೂಲಕ ಬಗೆಹರಿಸಲು ಪಂಚಾಯಿತಿದಾರರು ವಾದಿ ಪ್ರತಿವಾದಿಗಳ ಮನವೊಲಿಸಲು ಪ್ರಯತ್ನಿಸುತ್ತಾರೆ. ಸಮಾಜದ ಹಿರಿಯರ ಮನವೊಲಿಕೆಯಿಂದ ವಾದಿ, ಪ್ರತಿವಾದಿಗಳ ಮನಪರಿವರ್ತನೆಯಾಗಿ, ತಮ್ಮ ದೂರನ್ನು ಹಿಂದೆ ಪಡೆದುಕೊಂಡು, ಸಮಾಜದ ರಾಜಿ ಪಂಚಾಯಿತಿಗಳಿಗೆ ಬದ್ಧರಾಗುವುದಿದೆ. ಆದರೂ, ಮುಂದಕ್ಕೆ ಅವರೊಳಗೆ ಯಾವುದೇ ತರದ ಘರ್ಷಣೆ ಅಥವಾ ತಕರಾರು ಬಾರದಂತೆ ಪಂಚಾಯತಿದಾರರು ಬುದ್ಧಿವಾದ ಹೇಳುವುದು ರೂಢಿ.

**ತೀರ್ಪು/ಶಿಕ್ಷೆ**

ಮೊಗವೀರ ಸಮಾಜದ ಪಂಚಾಯಿತಿ ಪದ್ಧತಿಯಲ್ಲಿ ಯಾರಾದರೂ ತಪ್ಪಿತಸ್ಥನೆಂದು ರುಜುವಾತಾದರೆ, ಶಿಕ್ಷಿಸಲ್ಪಡುತ್ತಾನೆ. ಕೊಡಲ್ಪಡುವ ಶಿಕ್ಷೆಯು ಅತ್ಯಲ್ಪ ಪ್ರಮಾಣದಲ್ಲಿರುತ್ತದೆ. ಓರ್ವನ ಅಪರಾಧ ಸಾಬೀತಾಗಿ ಆತನಿಗೆ ತಾನು ಶಿಕ್ಷಾರ್ಹನೆಂದು ಅರಿವಾದಾಗ, ಆತನು ತನ್ನ ತಪ್ಪನ್ನು ಕ್ಷಮಿಸುವಂತೆ ಗ್ರಾಮ ಸಭೆಯ ಮುಂದೆ ಸಾಷ್ಟಾಂಗ ನಮಸ್ಕಾರ ಮಾಡಿ ಕ್ಷಮೆ ಕೇಳುವುದಿದೆ. ಗ್ರಾಮಸಭೆ ಆತನ ತಪ್ಪನ್ನು ಕ್ಷಮಿಸಬಹುದು ಅಥವಾ ಗ್ರಾಮದ ದೇವರಿಗೆ ಇಂತಿಷ್ಟು ಕಾಣಿಕೆ ಹಾಗೂ ಸೇವೆ ಮಾಡಲು ಸಭೆಯು ಸೂಚಿಸಬಹುದು. ಕೆಲವೊಂದು ಸಂದರ್ಭಗಳಲ್ಲಿ, ತಪ್ಪಿತ'ಸ್ಥನಿಗೆ ಇಂತಿಷ್ಟು ದಂಡ ಪಾವತಿಸುವಂತೆ ಆದೇಶ ನೀಡಬಹುದು. ಇವೆಲ್ಲಾ ಆತನಿಂದಾದ ತಪ್ಪಿನ ಪ್ರಮಾಣಕ್ಕನುಗುಣವಾಗಿ ವಿಧಿಸಲಾಗುತ್ತದೆ. ತಪ್ಪಿತಸ್ಥನು, ತೀರ್ಪನ್ನು ವಿರೋಧಿಸಿ ಉದ್ಧಟತನ ತೋರಿದರೆ, ಅಂತವರಿಗೆ 'ಸಮಾಜದ ಬಹಿಷ್ಕಾರ'ವನ್ನು ('ಮನವನ್ನು') ಘೋಷಿಸಲಾಗುತ್ತದೆ. ಯಾವನೇ ಅಪರಾಧಿಗೆ 'ಸಮಾಜದ ಬಹಿಷ್ಕಾರ' ಘೋಷಣೆಯಾದರೆ, ತತ್‌ಕ್ಷಣದಿಂದ ಆತನನ್ನು ಸಮಾಜದ ಕೂಡುಕಟ್ಟಿನಿಂದ ಹೊರಗಿಡಲಾಗುತ್ತದೆ. ಆತ, ತನ್ನ ಗ್ರಾಮದಲ್ಲಿ ಯಾವುದೇ ಸಭೆ' ಸಮಾರಂಭಗಳಲ್ಲಿ ಭಾಗವಹಿಸುವಂತಿಲ್ಲ. ಮತ್ತೊಮ್ಮೆ, ಆತನು ಪಂಚಾಯಿತಿದಾರರಿಗೆ ಶರಣಾಗಿ ಕ್ಷಮೆ ಬೇಡುವವರೆಗೆ, 'ಸಮಾಜದ ಬಹಿಷ್ಕಾರ' ಜಾರಿಯಲ್ಲಿರುತ್ತದೆ. ಈಗೀಗ, ಇಂತಹ ಶಿಕ್ಷೆ ವಿರಳವಾಗಿದೆ. ಕೆಲವೊಂದು ಕಾರಣಗಳಿಂದಾಗಿ, ಈ 'ಶಿಸ್ತು ಕ್ರಮ', 'ಬಹಿಷ್ಕಾರ', 'ಮನ' ಇತ್ಯಾದಿಗಳು ಈಗ ಬಳಕೆಯಲ್ಲಿಲ್ಲ.

**ಮೇಲಿನ ವೇದಿಕೆಗೆ ಮನವಿ**

ಪ್ರಸ್ತುತ ನಮ್ಮ ದೇಶದಲ್ಲಿ, ತಾಲೂಕು, ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ವಿವಿಧ ಹಂತಗಳ ನ್ಯಾಯಾಲಯ ಗಳಿರುವಂತೆಯೇ, ಮೊಗವೀರ ಜನಾಂಗದಲ್ಲಿಯೂ ನ್ಯಾಯದಾನ ಪ'ದ್ಧತಿಗೆ, ಇಂತಹದೇ ಪರಿಕಲ್ಪನೆ ಹಿಂದಿನಿಂದಲೂ ಇತ್ತು. ಯಾರಿಗಾದರೂ ಗ್ರಾಮಸಭೆಯಲ್ಲಿ ಪಂಚಾಯಿತಿದಾರರು ನೀಡಿದ ತೀರ್ಪು ಒಪ್ಪತಕ್ಕದ್ದಲ್ಲವೆಂದು ಮನವರಿಕೆಯಾದರೆ, ಆತನು ಮೇಲಿನ ವೇದಿಕೆಗೆ ಅಂದರೆ, ಸಂಯುಕ್ತ ಪಟ್ಣ ಸಭೆಗೆ ಮೇಲ್ಮನವಿ ಸಲ್ಲಿಸುವ ಅವಕಾಶವಿದೆ. ಈ ಕ್ರಮ ಈಗಲೂ ಚಾಲ್ತಿಯಲ್ಲಿದೆ. ಸಂಯುಕ್ತ ಪಟ್ಣ ಸಭೆ, ಮನವಿದಾರರನ್ನು ವಾದಿಯೆಂದೂ, ಆತನ ಗ್ರಾಮಸಭೆಯನ್ನು ಪ್ರತಿವಾದಿಯೆಂದೂ ಪರಿಗಣಿಸಿ, ನ್ಯಾಯ ವಿಮರ್ಶೆ ಮಾಡಿ ತೀರ್ಪನ್ನು ನೀಡುತ್ತದೆ. ಅಪರಾಧಿಗೆ ಆ ತೀರ್ಪಿನಿಂದಲೂ ಸಮಾಧಾನವಾಗದಿದ್ದರೆ, ಹೋಬಳಿ ಸಭೆಗೆ ಮನವಿ ಮಾಡಿಕೊಳ್ಳಬಹುದು. ಅದರ ಮೇಲೆ, ಮೊಗವೀರ ಮಹಾಜನ ಸಂಘಕ್ಕೆ ಮೇಲ್ಮನವಿ ಮಾಡಿಕೊಳ್ಳಬಹುದು. ಬಹಳ ಹಿಂದೆ, ಇಂತಹ ತಕರಾರುಗಳು ಅಂತಿಮವಾಗಿ ಬೆಣ್ಣೆಕುದ್ರು ದೇವಸ್ಥಾನದಲ್ಲಿರುವ ಮೊಗವೀರ ಕುಲಗುರುಗಳ ಸಮ್ಮುಖದಲ್ಲಿ

ಮುಕ್ತಾಯವಾಗುತ್ತಿತ್ತು. ಕುಲಗುರುಗಳು ನೀಡಿದ ನ್ಯಾಯ ಸಮ್ಮತ ತೀರ್ಪು ಅಂತಿಮವಾಗುತ್ತಿತ್ತು. ವಾದಿ ಪ್ರತಿವಾದಿಗಳು, ಕುಲ ದೈವದ ಸಾನಿಧ್ಯದಲ್ಲಿ ಕುಲಗುರುಗಳ ತೀರ್ಪಿಗೆ ಭಯ ಭಕ್ತಿ ಹಾಗೂ ಗೌರವದಿಂದ ತಲೆಬಾಗುತ್ತಿದ್ದರು.

**ಸಹಕಾರ ಮತ್ತು ಸಹಬಾಳ್ವೆ**

ಮೊಗವೀರ ಸಮಾಜದಲ್ಲಿ, ಸಹಕಾರ ಮತ್ತು ಸಹಬಾಳ್ವೆ ಮನೋಭಾವವನ್ನು ಸಮಾಜದ ಹಿರಿಯರು ಪ್ರತೀ ಕುಟುಂಬದಲ್ಲಿಯೂ ಅನುಷ್ಠಾನಕ್ಕೆ ತಂದಿದ್ದರೆನ್ನಬಹುದು. ಮೊಗವೀರರು ತಮ್ಮ ದುಡಿಮೆಯ ಒಂದಂಶವನ್ನು ಗ್ರಾಮದೇವರ, ಭಜನಾ ಮಂದಿರ ಮತ್ತು ಶೈಕ್ಷಣಿಕ ಉದ್ದೇಶಗಳಿಗಾಗಿ ವಿನಿಯೋಗಿಸುತ್ತಿದ್ದರು. ಅದರ ಪ್ರಯೋಜನವು ಅವರ ಗ್ರಾಮದ ಸದಸ್ಯರಿಗೇ ತಲುಪುತ್ತಿತ್ತು. ಮೊಗವೀರರ ಪೂರ್ವಜರು ಅನಕ್ಷರಸ್ಥರಾಗಿದ್ದರೂ, ತಮ್ಮ ಗ್ರಾಮದ ಮಕ್ಕಳಿಗಾಗಿ 'ಫಿಶರೀಸ್' ಶಾಲೆಗಳನ್ನು ಪ್ರಾರಂಭಿಸಿ ಪ್ರಾಥಮಿಕ ಶಿಕ್ಷಣ ನೀಡುವ ವ್ಯವಸ್ಥೆಯನ್ನು ಮಾಡಿದ್ದರು.  ಮುಂದೆ ಪ್ರೌಢ ಶಿಕ್ಷಣ ಮತ್ತು ಕಾಲೇಜು ಕೂಡ ಸ್ಥಾಪನೆ ಮಾಡಿದರು. ಅನಕ್ಷರಸ್ಥ ಪೂರ್ವಜರ ದೂರಾಲೋಚನೆಯಿಂದ, ತಮ್ಮ ಮಕ್ಕಳ ಮುಂದಿನ ಭವಿಷ್ಯಕ್ಕಾಗಿ ತಮ್ಮ ಕಠಿಣ ದುಡಿಮೆಯ ಪಾಲಿನಿಂದ ಒಂದಂಶವನ್ನು ಈ ಶೈಕ್ಷಣಿಕ ಉದ್ದೇಶಗಳಿಗಾಗಿ ವಿನಿಯೋಗಿಸುತಿದ್ದರು. ಇದು ಸ್ತುತ್ಯಾರ್ಹ ವಿಷಯ. ಗ್ರಾಮಸಭೆಯು, ತನ್ನ ಗ್ರಾಮದ ಯುವ ಜನರ'ಲ್ಲಿ ಸಹಕಾರ ಮತ್ತು ಸಹಬಾಳ್ವೆ'ಯ ಮನೋಭಾವ ಗ್ರಾಮದಲ್ಲಿ ಬೆಳೆಯುವಂತೆ 'ಮರಣ ನಿಧಿ' ('ಮರಣ ಫಂಡು'), ಹಳೆ ವಿದ್ಯಾರ್ಥಿ ಸಂಘ, ವ್ಯಾಯಾಮ ಶಾಲೆ ಮೊದಲಾದ ಸಂಸ್ಥೆಗಳನ್ನು ಸ್ಥಾಪಿಸಿ, ಜನೋಪಯೋಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯಪ್ರವರ್ತರಾಗಲು ಪ್ರೋತ್ಸಾಹಿಸುತ್ತಿತ್ತು. ಮೊಗವೀರ ಮಹಿಳೆಯರು, ಮಹಿಳಾ ಮಂಡಲಗಳು ತಮ್ಮ ಮಹಿಳಾ ಸದಸ್ಯರಿಗೆ ಹೊಲಿಗೆ ತರಬೇತಿ, ಲೈಬ್ರರಿ ಮುಂತಾದ ಸಂಸ್ಥೆಗಳನ್ನು ನಡೆಸುವ ಮೂಲಕ ಸಕ್ರಿಯರಾಗಿರುತ್ತಾರೆ. ಕೆಲವು ಗ್ರಾಮಸಭೆಗಳ'ಲ್ಲಿ ಬೆಳೆ ಖಟಾವಿನ ಸಮಯದಲ್ಲಿ ಸಗಟು ವ್ಯಾಪಾರಿಗಳಿಂದ ಅಕ್ಕಿಯನ್ನು ಖರೀದಿಸಿ, ಅವಶ್ಯಕತೆಯಿರುವ ತಮ್ಮ ಸದಸ್ಯರಿಗೆ ನೀಡುವ ವ್ಯವಸ್ಥೆಯಿತ್ತು. ಅದರ ಮೌಲ್ಯವನ್ನು ತಮ್ಮ ಮುಂದಿನ ದುಡಿಮೆಯಿಂದ ಗ್ರಾಮಸಭೆಗೆ ಪಾವತಿಸ ಬಹುದಾಗಿತ್ತು. ಮೊಗವೀರ ಸಮಾಜದಲ್ಲಿ ಪ್ರಸ್ತುತ ಕಾರ್ಯಾಚರಿಸುತ್ತಿರುವ ಮಹಿಳಾ ಮಂಡಲಗಳು, ಗ್ರಾಮ ಸಭೆಯ ದೈವಸ್ಥಾನಗಳು, ಭಜನಾ ಮಂದಿರಗಳು, ಶಾಲೆ ಮತ್ತು ಇತರ ಸಂಘ–ಸಂಸ್ಥೆಗಳ ಯಾದಿಯನ್ನು ಅಧ್ಯಾಯ "ಅನುಬಂಧಗಳು" ವಿಭಾಗ "ಅನುಬಂಧ 2, 3 ಮತ್ತು 4"'ರಲ್ಲಿ ಕೊಡಲಾಗಿದೆ.

**ಮೀನುಗಾರಿಕೆ ಶಾಲೆಗಳಿಗೆ ಉತ್ತೇಜನ**

ಹಿಂದೆ ಮದ್ರಾಸು ಸರಕಾರ ಅಸ್ತಿತ್ವದಲ್ಲಿದ್ದ ಸಮಯದಲ್ಲಿ (ಕ್ರಿ.ಶ 1884–1947) ಅನಕ್ಷರಸ್ಥರಾಗಿದ್ದ ಮೊಗವೀರ ಜನಾಂಗವನ್ನು ಶೈಕ್ಷಣಿಕವಾಗಿ ಮುಂದಕ್ಕೆ ತರುವ ಸದುದ್ದೇಶದಿಂದ, ಮದ್ರಾಸು ಪ್ರಾಂತ್ಯದ ಮೀನುಗಾರಿಕಾ ಇಲಾಖೆಯು 36 ಪ್ರಾಥಮಿಕ/ಹಿರಿಯ ಪ್ರಾಥಮಿಕ ಶಾಲೆಗಳನ್ನು, 15 ಪ್ರೌಢ ಶಾಲೆಗಳನ್ನು ಮತ್ತು ಜ್ಯೂನಿಯರ್ ಕಾಲೇಜುಗಳನ್ನು ಸ್ಥಾಪಿಸಿ ಪ್ರೋತ್ಸಾಹಿಸಿತ್ತು. ಸರಕಾರದ ಈ ಯೋಜನೆಗೆ ಸ್ಪಂದಿಸಿ, ಹಲವಾರು ಮೊಗವೀರ ಗ್ರಾಮಸಭೆಗಳು, ಶಾಲೆಗೆ ಬೇಕಾದ ಕಟ್ಟಡ ಮತ್ತು ಪೀಠೋಪಕರಣಗಳನ್ನು ಸ್ವತಃ ಮುತುವರ್ಜಿ ವಹಿಸಿ ಒದಗಿಸಿ ಸರಕಾರದ ಯೋಜನೆಯನ್ನು ಕಾರ್ಯಗತಗೊಳಿಸುವರೆ ಪ್ರೋತ್ಸಾಹಿಸಿತ್ತು.  ಕರ್ನಾಟಕ ಸರಕಾರ ಈ ಮೀನುಗಾರಿಕಾ ಶಾಲೆಗಳನ್ನು ಇತರ ಶಾಲೆಯೊಂದಿಗೆ ಜೋಡಿಸಿ, ಅವುಗಳ ಅಸ್ತಿತ್ವವನ್ನು ಮುಕ್ತಾಯಗೊಳಿಸಿತು. ಮೊಗವೀರರ ಪರಿವಿಧಿಯಲ್ಲಿ ಬರುವ ವಿದ್ಯಾ ಸಂಸ್ಥೆಗಳ ವಿವರವನ್ನು ಅಧ್ಯಾಯ "ಅನುಬಂಧಗಳು" ವಿಭಾಗ "ಅನುಬಂಧ 4"ರಲ್ಲಿ ಓದಿ ತಿಳಿಯಬಹುದು.

**ಮೊಗವೀರ ಸಂಯುಕ್ತ ಪಟ್ಣಗಳು**

**ಒಂದು ಪರಿಕಲ್ಪನೆ:** ಹಲವು ಮೊಗವೀರ ಗ್ರಾಮಸಭೆಗಳು ಒಟ್ಟು ಸೇರಿ ಒಂದು ಸಂಯುಕ್ತಪಟ್ಣವಾಗುತ್ತದೆ. ಸಂಸ್ಕೃತ ಶಬ್ದ 'ಸಂಯುಕ್ತ' ಎಂದರೆ 'ಒಂದು ಸಮೂಹ ಅಥವಾ ಒಕ್ಕೂಟ' ಮತ್ತು 'ಪಟ್ಣ' ಎಂದರೆ, ಹಳ್ಳಿ ಅಥವಾ ಗ್ರಾಮ ಎಂದರ್ಥ. 'ಸಂಯುಕ್ತ ಪಟ್ಣ' ಅಂದರೆ, 'ಗ್ರಾಮಗಳ ಒಕ್ಕೂಟ'. ಮೊಗವೀರ ಸಮಾಜದ ಬೆಳವಣಿಗೆಯಲ್ಲಿ, ಸಂಯುಕ್ತ ಪಟ್ಣಗಳ ಪಾತ್ರ ಮಹತ್ವದ್ದಾಗಿದೆ.

**ಸಂಯುಕ್ತ ಪಟ್ಣಗಳ ಮೂಲ**

ಕರಾವಳಿಯ ಮೂಲ ನಿವಾಸಿಗಳಾದ ಮೊಗವೀರರು, ತಮ್ಮ ಹಳ್ಳಿಗಳಲ್ಲಿ ಪ್ರಥಮವಾಗಿ ಗ್ರಾಮಸಭೆಗಳನ್ನು ಸ್ಥಾಪಿಸಿದ್ದರು. ಅಂತಹ ಹಲವು ಗ್ರಾಮಸಭೆಗಳು ಒಟ್ಟು ಸೇರಿ ಸ್ಥಾಪಿಸಿದ ಸಂಸ್ಥೆಯೇ ಸಂಯುಕ್ತ ಪಟ್ಣ ಸಭೆ. ಅಂದಿನ ದಿನಗಳಲ್ಲಿ ನಡೆಸಲ್ಪಡುತ್ತಿದ್ದ ಮೀನುಗಾರಿಕಾ ಪದ್ಧತಿಗೆ, ಅಂತಹ ಒಂದು ಗ್ರಾಮಸಭೆಗಳ ಒಕ್ಕೂಟ ಅಥವಾ ಸಂಯುಕ್ತ ಸಭೆಯ ಆವಶ್ಯಕತೆ'ಯಿತ್ತು. 'ವೈ ಬಲೆ' ಎಂಬುದು ಅಂದಿನ ಕಾಲದಲ್ಲಿ ಆಳ ಸಮುದ್ರದಲ್ಲಿ ನಡೆಸಲ್ಪ ಡುವ ಮೀನುಗಾರಿಕೆ. ಒಂದೇ ಗ್ರಾಮದವರಿಂದ ಅಂತಹ ಮೀನುಗಾರಿಕೆ ಕಷ್ಟ ಸಾಧ್ಯವಾದ್ದರಿಂದ, ನೆರೆಯ (ಅಕ್ಕಪಕ್ಕದ) ಗ್ರಾಮಗಳ ಕೂಡುವಿಕೆಯಿಂದ ಮೀನುಗಾರಿಕೆ ನಡೆಸುತ್ತಿದ್ದರು. ಅಂತಹ ಪದ್ಧತಿಯ ಮೀನುಗಾರಿಕೆಯನ್ನು ನಿಯಂತ್ರಿಸಲು ಒಂದು ಪ್ರತ್ಯೇಕ ಸಮೂಹದ ಅವಶ್ಯಕತೆ ನಿರ್ಮಾಣವಾಯಿತು. ಸಂಯುಕ್ತ ಪಟ್ಣ ಸಭೆಗಳು ಅಸ್ತಿತ್ವವಕ್ಕೆ ಬರಲು ಇದು ಮೂಲ ಕಾರಣವಾಯಿತು. ಈಗ ಚಾಲ್ತಿಯಲ್ಲಿರುವ (ನಾಲ್ಕೂರು) ನಾಲ್ಕು ಪಟ್ಣ ಸಂಯುಕ್ತ ಸಭೆ, ('ಏಳೂರು') ಏಳು ಪಟ್ಣ ಸಂಯುಕ್ತ ಸಭೆ, (ಹದಿನಾಲ್ಕೂರು) ಹದಿನಾಲ್ಕು ಪಟ್ಣ ಸಂಯುಕ್ತ ಸಭೆ ಇಂತಹ ಹತ್ತು ಸಂಯುಕ್ತ ಪಟ್ಣ ಸಭೆಗಳು ದಕ್ಷಿಣ ಕನ್ನಡ ಮೊಗವೀರ ಮಹಾಜನ ಸಂಘದಲ್ಲಿವೆ. 'ವೈ ಬಲೆ' ಕಸುಬಿನಿಂದ ದೊರೆಯುವ ಸಂಪಾದನೆಯನ್ನು ಹಂಚುವ ಹೊಣೆ ಕೂಡಾ ಅಂದಿನ ದಿನಗಳಲ್ಲಿ ಸಂಯುಕ್ತ ಪಟ್ಣ ಸಭೆಯ ಉಸ್ತುವಾರಿಯಲ್ಲಿಯೇ ನಡೆಯುತ್ತಿತ್ತು. 'ವೈ ಬಲೆ' ಮೀನುಗಾರಿಕೆಯ ಪದ್ಧತಿಯ ಬಗ್ಗೆ ಹೆಚ್ಚಿನ ವಿವರವನ್ನು ಅಧ್ಯಾಯ "ಮೊಗವೀರರ ವೃತ್ತಿಗಳು"ದಲ್ಲಿ ನೀಡಲಾಗಿದೆ.

**ಸಂಯುಕ್ತ ಪಟ್ಣ ಸಭೆಯ ಕಾರ್ಯ ನಿರ್ವಹಣೆ**

ಸಂಯುಕ್ತ ಪಟ್ಣಕ್ಕೆ ಸೇರಿದ ಗ್ರಾಮಸಭೆಗಳು, ತಮ್ಮ ಸಭೆಯ ವತಿಯಿಂದ ನಿಗತಿತ ಸದಸ್ಯರನ್ನು ಆಯ್ಕೆ ಮಾಡಿ, ಸಂಯುಕ್ತ ಪಟ್ಣ ಸಭೆಗೆ ಕಳುಹಿಸುತ್ತಾರೆ. ಹಾಗೆ ಆ ಸಂಯುಕ್ತ ಪಟ್ಣ ಸಭೆಗೆ ಸೇರಿದ್ದ ಎಲ್ಲಾ ಗ್ರಾಮಸಭೆಗಳಿಂದ ಸದಸ್ಯರು ಆಯ್ಕೆಯಾಗಿ, ಸಂಯುಕ್ತ ಪಟ್ಣ ಸಭೆಯ ಆಡಳಿತ ಮಂಡಳಿಯ ಸದಸ್ಯರಾಗುತ್ತಾರೆ. ಅವರು, ತಮ್ಮೊಳಗೆ ಅಧ್ಯಕ್ಷ, ಕಾರ್ಯದರ್ಶಿ ಹಾಗೂ ಖಜಾಂಚಿಯನ್ನು ಆರಿಸಿ, ಕಾರ್ಯಕಾರಿಣಿ ಸಮಿತಿ ರಚಿಸುತ್ತಾರೆ. ಗ್ರಾಮಸಭೆಗಳಿಂದ ಕೊಡಲ್ಪಡುವ ಸದಸ್ಯತನ ಶುಲ್ಕ ('ವರಾಡ ವಂತಿಗೆ'), ಸಂಯುಕ್ತ ಪಟ್ಣ ಸಭೆಗಳ ದ್ರವ್ಯ ಸಂಪನ್ಮೂಲವಾಗಿರುತ್ತದೆ. ಸಂಯುಕ್ತ ಪಟ್ಣ ಸಭೆಗಳು ತಮ್ಮ ವ್ಯಾಪ್ತಿಗೆ ಒಳಪಟ್ಟಿರುವ ಗ್ರಾಮ ಸಭೆಗಳ ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯಾಚರಿಸುತ್ತಾರೆ. ಈ ಮೂಲಕ ತಮ್ಮ ಮೂಲಧನವನ್ನು ಹೆಚ್ಚಿಸಿಕೊಂಡು, ಕೆಲವು ಸಂಯುಕ್ತ ಪಟ್ಣ ಸಭೆಗಳು ಸ್ವಂತ ಕಾರ್ಯಾಲಯವನ್ನು ಮಾಡಿಕೊಂಡಿವೆ. ಅಲ್ಲದೆ, ಸದಸ್ಯರ ಮತ್ತು ಮೊಗವೀರ ಗ್ರಾಮಸಭೆಗಳ ಅಭಿವೃದ್ಧಿಗಾಗಿ ಕಾರ್ಯನಿರತರಾಗಿದ್ದಾರೆ. ಇಂತಹ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಮೂಲ್ಕಿ ನಾಲ್ಕು ಪಟ್ಣ ಸಂಯುಕ್ತ ಸಭಾ ಮತ್ತು ಮಲ್ಪೆ ಏಳೂರು ಸಂಯುಕ್ತ ಸಭಾಗಳು ಮುಂಚೂಣಿಯಲ್ಲಿವೆ.

**ಮೂರು ಹೋಬಳಿಗಳು, ಒಂದು ಪರಿಕಲ್ಪನೆ**

**ಮೊಗವೀರ ಸಮಾಜದ ಮೂರು ಹೋಬಳಿಗಳು:** (1) ಮಂಗಳೂರು ಹೋಬಳಿ (2) ಬಾರ್ಕೂರು ಹೋಬಳಿ ಮತ್ತು (3) ಬಗ್ವಾಡಿ ಹೋಬಳಿ ಕ್ರಮವಾಗಿ, ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಮೂರು ತಾಲೂಕುಗಳಲ್ಲಿವೆ. ಮಂಗಳೂರು ತಾಲೂಕು 'ಮಂಗಳೂರು ಹೋಬಳಿ', ಉಡುಪಿ ತಾಲೂಕು 'ಬಾರ್ಕೂರು ಹೋಬಳಿ' ಮತ್ತು ಕುಂದಾಪುರ ತಾಲೂಕು 'ಬಗ್ವಾಡಿ ಹೋಬಳಿ' ಎನ್ನಬಹುದು.

**ಮಂಗಳೂರು ಹೋಬಳಿ**

ಗ್ರಾಮಸಭೆಗಳು ಒಟ್ಟು ಸೇರಿ ಸಂಯುಕ್ತ ಪಟ್ಣ ಸಭೆ ಆದ ಹಾಗೆಯೇ, ಸಂಯುಕ್ತ ಪಟ್ಣ ಸಭೆಗಳು ಒಟ್ಟು ಸೇರಿ ಹೋಬಳಿ ಸಭೆಯ ಅಸ್ತಿತ್ವ ಪಡೆಯಿತು. (೧) ಮಂಗಳೂರು ಹದಿನಾಲ್ಕು (14) ಪಟ್ಣ, (೨) ಸುರತ್ಕಲ್ (5) ಪಟ್ಣ ಮತ್ತು (೩) ಮೂಲ್ಕಿ ನಾಲ್ಕು (4) ಪಟ್ಣ ಎಂಬ ಮೂರು ಸಂಯುಕ್ತ ಪಟ್ಣ ಸಭೆಗಳ ಒಕ್ಕೂಟವೇ ಮಂಗಳೂರು ಹೋಬಳಿ. ಮಂಗಳೂರು ಹೋಬಳಿಯಲ್ಲಿ ಒಟ್ಟು 29 ಗ್ರಾಮಸಭೆಗಳಿವೆ. ಈ ಬಗ್ಗೆ ವಿವರವಾದ ಮಾಹಿತಿ ಈ ಅಧ್ಯಾಯದ ಮುಂದಿನ ಪುಟಗಳಲ್ಲಿ ಕೊಡಲಾಗಿದೆ. ಗ್ರಾಮಸಭೆಗಳ ವಿವರವನ್ನು ಅಧ್ಯಾಯ "ಅನುಬಂಧಗಳು" ವಿಭಾಗ "ಅನುಬಂಧ 1"ದಲ್ಲಿ ಕೊಡಲಾಗಿದೆ.

**ಬಾರ್ಕೂರು ಹೋಬಳಿ**

ಏಳು ಸಂಯುಕ್ತ ಪಟ್ಣ ಸಭೆಗಳು ಒಟ್ಟು ಸೇರಿ, ಬಾರ್ಕೂರು ಹೋಬಳಿಯ ರಚನೆಯಾಯಿತು. ಏಳು ಸಂಯುಕ್ತ ಪಟ್ಣ ಸಭೆಗಳ ಮಾಹಿತಿ ಈ ರೀತಿ ಇವೆ. (೧) ಹೆಜಮಾಡಿ (7) ಏಳೂರು (೨) ಕಾಡಿಪಟ್ಣ ನಡಿಪಟ್ಣ ಎರಡು (2) ಪಟ್ಣ (1), (೩) ಕಾಪು ನಾಲ್ಕು (4) ಪಟ್ಣ, (೪) ಉದ್ಯಾವರ ಹದಿನಾಲ್ಕು (14) ಪಟ್ಣ, (೫) ಮಲ್ಪೆ (7) ಏಳೂರು ಪಟ್ಣ, (೬) ತೋನ್ಸೆ (4) ಪಟ್ಣ ಮತ್ತು (೭) ಬಾರ್ಕೂರು ಸಂಯುಕ್ತ ಸಭಾ (82 ಗ್ರಾಮಗಳಿವೆ). ಬಾರ್ಕೂರು ಹೋಬಳಿಯಲ್ಲಿ ಒಟ್ಟು 132 ಮೊಗವೀರ ಗ್ರಾಮಸಭೆಗಳಿವೆ. ಸಂಯುಕ್ತ ಪಟ್ಣ ಸಭೆಗಳ ವಿವರವನ್ನು ಈ ಅಧ್ಯಾಯದ ಮುಂದಿನ ವಿಭಾಗದಲ್ಲಿ ಕೊಡಲಾಗಿದೆ. ಗ್ರಾಮಸಭೆಗಳ ವಿವರವನ್ನು ಅಧ್ಯಾಯ "ಅನುಬಂಧ" ವಿಭಾಗ "ಅನುಬಂಧ 1"ದಲ್ಲಿ ಕೊಡಲಾಗಿದೆ.

**ಬಗ್ವಾಡಿ ಹೋಬಳಿ**

ಬಗ್ವಾಡಿ ಹೋಬಳಿಗೆ ಸಂಬಂಧ ಪಟ್ಟ ಹಳ್ಳಿಗಳು ಕುಂದಾಪುರ ತಾಲೂಕಿನಲ್ಲಿವೆ. ಸುಮಾರು 192 ಮೊಗವೀರ'ರ 'ಕೂಡಿಗೆಗಳು', ಅಂದರೆ, ಮೊಗವೀರ" ಗ್ರಾಮಸಭೆಗಳು ಬಗ್ವಾಡಿ ಹೋಬಳಿಯಲ್ಲಿವೆ. ಕೆಲವು ಮೊಗವೀರ'ರ 'ಕೂಡಿಗೆ'ಗಳು ಸಮುದ್ರ ಕರಾವಳಿಯಲ್ಲಿದ್ದರೆ, ಹೆಚ್ಚಿನ ಮೊಗವೀರರ 'ಕೂಡಿಗೆ'ಗಳು ಒಳನಾಡಿನಲ್ಲಿ, ಅಂದರೆ ರಾಷ್ಟ್ರೀಯ ಹೆದ್ದಾರಿ 17 (66) ಮತ್ತು ಕೊಂಕಣ ರೈಲು ಮಾರ್ಗಕ್ಕಿಂತಲೂ ಪೂರ್ವದಲ್ಲಿವೆ. ಮಂಗಳೂರು ಹೋಬಳಿ ಮತ್ತು ಬಾರ್ಕೂರು ಹೋಬಳಿಗಳಲ್ಲಿ ಇದ್ದಂತೆ ಬಗ್ವಾಡಿ ಹೋಬಳಿಯಲ್ಲಿ ಸಂಯುಕ್ತ ಪಟ್ಣ ಸಭೆ ಅಸ್ತಿತ್ವದಲ್ಲಿಲ್ಲ. ಇತ್ತೀಚೆಗೆ, ಮೊಗವೀರ ಮಹಾಜನ ಸೇವಾ ಸಂಘ (ಬಗ್ವಾಡಿ ಹೋಬಳಿ 1941) 'ಸ್ತ್ರೀ ಶಕ್ತಿ' (ಮಹಿಳಾ ಸಮಾಜ) ಮತ್ತು ಯುವ ಸಂಘಟನೆಗಳನ್ನು ಸಂಯುಕ್ತ ಪಟ್ಣಗಳ ಮಾದರಿಯಲ್ಲಿ 'ಘಟಕ'ಗಳಾಗಿ ವಿಂಗಡಿಸಿದೆ.

**ದಕ್ಷಿಣ ಕನ್ನಡ ಮೊಗವೀರ ಮಹಾಜನ ಸಂಘ**

ದಕ್ಷಿಣ ಕನ್ನಡ ಮೊಗವೀರ ಮಹಾಜನ ಸಂಘ', ಹತ್ತು ಸಂಯುಕ್ತ ಪಟ್ಣ ಸಭೆಗಳು ಒಟ್ಟು ಸೇರಿ ಸ್ಥಾಪಿಸಲ್ಪಟ್ಟ ಪ್ರಧಾನ ಸಭೆ (ಮಾತೃ ಸಂಸ್ಥೆ)ಯಾಗಿದೆ. ಮಂಗಳೂರು ಹೋಬಳಿಯ ಮೂರು ಸಂಯುಕ್ತ ಪಟ್ಣ ಸಭೆಗಳು ಮತ್ತು ಬಾರ್ಕೂರು ಹೋಬಳಿಯ ಏಳು ಸಂಯುಕ್ತ ಪಟ್ಣ ಸಭೆಗಳು ಒಟ್ಟು ಸೇರಿ 161 ಗ್ರಾಮ ಸಭೆಗಳನ್ನು ಪ್ರತಿನಿಧಿಸುವ ಪರಮೋಚ್ಚ ಸಂಘಟನೆಯ ಕ್ಷಿಪ್ರ ವಿವರ ಈ ಕೆಳಗೆ ಕೊಟ್ಟಿದೆ.



DAKSHINA KANNADA

Mogaveera Mahajana Sangha.

THE MEMORANDUM

AND

THE ARTICLES OF ASSOCIATION

*Registered under Act X[illegible] of 1860 on*
*26th [illegible] of [illegible] 26.*

ದಕ್ಷಿಣ ಕನ್ನಡ

ಮೊಗವೀರ ಮಹಾಜನ ಸಂಘದ

ಕ್ರಮನಿಬಂಧನೆಗಳು

1860ನೇ ಇಸವಿ ನಂಬ್ರ 21ನೇ ಆಕ್ಟು ಪ್ರಕಾರ
ತಾ. 26–6–1926ರಲ್ಲಿ ಮಂಗಳೂರಲ್ಲಿ ರಿಜಿಸ್ಟ್ರಿಮಾಡಿಸೋಣಾಗಿದೆ.

"ಸರಸ್ವತೀ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್" ಮಂಗಳೂರು.

1926